ಶ್ರೀ ಟಿ. ಸಿ. ಹೊನ್ನಪ್ಪನವರು.—ಇದನ್ನು ಎಕ್ಸ್‌ಪ್ಲೋಸಿವ್ ಇನ್‌ಸ್ಪೆಕ್ಟರವರಿಂದ ವಿಚಾರಣೆ ಮಾಡಿಸಿ ಅವರ ಮಹಜರ್ ವರದಿ ತರಿಸಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು.

ಶ್ರೀ ಟಿ. ಸಿ. ಹೊನ್ನಪ್ಪನವರು.—ಏಕೆಂದರೆ ಇದು ಮುಖ್ಯವಾಗಿ Explosive Inspector ರವರಿಗೇ ಸಂಬಂಧಪಟ್ಟಿದ್ದು. Mining Inspector ರವರಿಗೆ ಸಂಬಂಧಿಸಿದ್ದಲ್ಲ. ಆದ್ದರಿಂದ ಅವರಿಂದ ವಿಚಾರಣೆ ನಡಿಸಿ ವರದಿ ತರಿಸಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲಾಖೆಯವರು ಯಾವ್ಯಾವ ರೀತಿ ವಿಚಾರಣೆ ನಡೆಸಬೇಕೋ ಏನೇನು ಮಾಡಬೇಕೋ ಅದನ್ನೆಲ್ಲಾ ಮಾಡಿದ್ದಾರೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಹಾಗಲ್ಲ ಬೇರೆ ಯಾರೂ ವಿಚಾರಣೆ ಮಾಡಕೂಡದು. Inspector of Explosives ರವರೇ ಬಂದು ವಿಚಾರಣೆ ನಡೆಸಬೇಕು. ಅವರಿಗೇ ಇದರ ವಿಚಾರದಲ್ಲಿ ಅನುಭವ ಇರುವುದು. ಆರೀತಿ ವಿಚಾರಣೆ ನಡೆಸಿದ ವರದಿ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ರಿಪೋರ್ಟ್ ಬಂದಿಲ್ಲ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಆ ರೀತಿ ಮಾಡುವಂತೆ ತಿಳಿಸುತ್ತೀರಾ?

ಮಾನ್ಯ ಶ್ರೀ ಟಿ ಮರಿಯಪ್ಪನವರು.—ಆಲೋಚನೆ ಮಾಡಬೇಕು.

ಶ್ರೀ ಟಿ. ಸಿ. ಹೊನ್ನಪ್ಪನವರು.—ಈಗ ತರಿಸಿರತಕ್ಕ ವರದಿಯ ಪ್ರಕಾರ ಮರಣ ಸಂಬಂಧಿಸಿದ್ದು ಬ್ಲಾಸ್ಟರ್‌ನ ತಪ್ಪಿನಿಂದಲೇ ಅಥವಾ ಬೇರೆ ಯಾವುದಾದರೂ ಕಾರಣದಿಂದಲೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Accident ಎಂದು ಆಗಲೇ ಹೇಳಿದ್ದೇನೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಆಕಸ್ಮಿಕವೆಂಬುದೇನೋ ಸರಿ. ಯಾರ ಅಜಾಗರೂಕತೆಯಿಂದ ಉಂಟಾಯಿತೆಂಬದನ್ನು ಹೇಳುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಕಸ್ಮಿಕವೆಂದು ಹೇಳಿದ್ದಾರೆ. ಇಂಥವರ ಅಜಾಗರೂಕತೆಯಿಂದಲೇ ಹೀಗಾಯಿತೆಂದು ಹೇಳುವುದು ಕಷ್ಟವೆಂದು ತಿಳಿಸಿದ್ದಾರೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—Inspector of Explosives ಅವರಿಗೆ ಈ ವಿಚಾರಣೆ ಹಾಕಿದ್ದರೆ ಇವೆಲ್ಲಾ ಹೊರಪಡುತ್ತಿತ್ತು. ಅವರಿಗೆ ಇದೆಲ್ಲಾ ಅನುಭವವಿದೆ. ಅವರು ಸುಲಭವಾಗಿ ಪತ್ತೆ ಮಾಡಬಲ್ಲರು. ಆದ್ದರಿಂದ ಈಗಲೂ ಅವರನ್ನು ವಿಚಾರಣೆ ನಡಿಸುವುದಕ್ಕೆ ಕಳುಹಿಸಿಕೊಡುತ್ತೀರಾ?

ಅಧ್ಯಕ್ಷರು.—ಯೋಚನೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು (ಬೆಂಗಳೂರು ಸಿಟಿ).—ಇಲ್ಲಿ ತಾವು ಪರಿಹಾರ ಕೊಡುತ್ತೇವೆಂದು ಹೇಳಿದ್ದೀರಿ; ಯಾವ ರೀತಿ ಪರಿಹಾರ ಕೊಡುತ್ತೀರೆಂಬುದನ್ನು ತಿಳಿಸುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪರಿಹಾರ ಕೊಡುವ ವಿಷಯವನ್ನು ಇನ್ನೂ ಆಖೈರಾಗಿ ತೀರ್ಮಾನ ಮಾಡಿಲ್ಲ. ಯುಕ್ತ ರೀತಿಯಲ್ಲಿ ಪರಿಹಾರ ಕೊಡುತ್ತಾರೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—'ಯುಕ್ತ ರೀತಿ' ಎಂದರೆ ಅದಕ್ಕೇನಾದರೂ ಗ್ರೇಡು, ಸ್ಕೇಲು ನಿಗದಿಯಾಗಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೆಲ್ಲಾ ಕಾನೂನಿದೆ. ಆದ್ದರಿಂದಲೇ ಬಾಕಿ ಎಲ್ಲಾ ವಿಷಯಗಳನ್ನೂ ಹೇಳುವುದಕ್ಕೆ ಕಷ್ಟವಾಗುತ್ತದೆಂದು ಹೇಳಿ ಈ ರೀತಿ ಉತ್ತರ ಕೊಟ್ಟಿದೆ.

Bus Permit applications pending

Q.—154. **Sri T. RAMACHAR** (Kolar District—General).—

Will the Government be pleased to state :—

(*a*) the number of applications for grant of bus permits still pending before Government;

(*b*) the names of persons to whom orders sanctioning bus permits are passed but not given effect to ?

A.—The Hon'ble Sri T. MARIAPPA (Home Minister).—

(*a*) Nil.
(*b*) Nil.

ಶ್ರೀ ಟಿ. ರಾಮಾಚಾರ್‌ರವರು. — ಇಂಥ ಅರ್ಜಿಗಳು ಸರ್ಕಾರದವರ ಮುಂದೆ ಯಾವುದೂ ಇಲ್ಲವೆಂದು ಹೇಳಿದ್ದೀರಿ. ಟ್ರಾಫಿಕ್ ಬೋರ್ಡಿನವರ ಮುಂದೇನಾದರೂ ಇವೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ನೋಟೀಸ್ ಬೇಕು.

Cancellation of New Bus Permits.

Q.—226. Sri K. SAMPANGI RAMIAH (Kolar District—General).—Will the Government be pleased to state :—

(*a*) whether they are contemplating the extension of the Nationalisation of the Bus Services in the State ;

(*b*) the number of new permits that have been issued for fresh lines for the last two years ;

(*c*) whether any permits were cancelled for the reasons of illegal leases of the lines ;

(*d*) the number of cases in which the said cancellation orders were set aside ?

A.—The Hon'ble Sri T. MARIAPPA (Home Minister).—

(*a*) Yes.
(*b*) 430.
(*c*) Yes. Two permits were cancelled.
(*d*) One.

ಶ್ರೀ ಕೆ. ಸಂಪಂಗಿರಾಮಯ್ಯನವರು.— ಸರ್ಕಾರದವರು ರದ್ದುಮಾಡಿರುವ ಬಸ್ ಪರ್ಮಿಟ್‌ಗಳಲ್ಲದೆ ಡೆಪ್ಯುಟೇಕಮಾಷನರುಗಳು ರದ್ದುಮಾಡಿರುವುದನ್ನು ಸರ್ಕಾರದವರು ಇಲ್ಲಿ ತಿಳಿಸಿದ್ದಾರೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಅದಕ್ಕೆ ನೋಟೀಸ್ ಬೇಕು.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಇಲ್ಲಿ ಕೆಲವು ಪರ್ಮಿಟ್ಟುಗಳನ್ನು ವಾಪಸು ಕೊಡಲಾಯಿತೆಂದು ತಿಳಿಸಿದ್ದೀರಿ. ಹಾಗೆ ವಾಪಸು ಕೊಡುವುದಕ್ಕೆ ಕಾರಣವೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಅವುಗಳಬಗ್ಗೆ ಪ್ರಾಯಶಃ ಹಿಯರಿಂಗ್ ಆಗಿ ಆಮೇಲೆ ವಾಪಸು ಕೊಟ್ಟರೆಂದು ಕಾಣುತ್ತದೆ. ವಿವರಗಳನ್ನು ಹೇಳಬೇಕಾದರೆ ನೋಟೀಸ್ ಬೇಕು.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಹಾಗೆ ವಾಪಸು ಕೊಟ್ಟರುವುದು ಯಾರಿಗೆ ಎಂಬುದನ್ನು ತಿಳಿಸುತ್ತೀರಾ ? ಅವರ ಹೆಸರೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಇಂಥವರೇ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ನೋಟೀಸ್ ಬೇಕು.

ಶ್ರೀ ಕೆ. ಸಂಪಂಗಿರಾಮಯ್ಯನವರು.— ಈ ರೀತಿಯಾಗಿ ವಾಪಸು ಕೊಡುತ್ತಾ ಬಂದರೆ ಜನಗಳಿಗೆ ತಾವೂ ಆದೇರೀತಿ ಮಾಡಿದರೂ ತಪ್ಪಿಸಿಕೊಳ್ಳಬಹುದೆಂದು ಆ ರೀತಿ ಮಾಡಲು ಉತ್ತೇಜನ ಕೊಟ್ಟಂತಾಗಲಿಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಅದು ಅಭಿಪ್ರಾಯ. Deserving ಆಗಿರುವ ಸಂದರ್ಭಗಳಲ್ಲಿ ವಾಪಸು ಕೊಡಬೇಕಾಗುತ್ತದೆ.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಅದಕ್ಕಾಗಿಯೇ ನಾನು ಕೇಳುತ್ತಿರುವುದು. ಅಂದಾಜಾಮೇಲಾದರೂ ಯಾವ ಕಾರಣದಿಂದ ಅವರಿಗೆ ವಾಪಸು ಕೊಡಲಾಯಿತೆಂಬುದನ್ನು ತಿಳಿಸುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ನೋಟೀಸ್ ಬೇಕು.

ಶ್ರೀ ಕೆ. ಸಂಪಂಗಿರಾಮಯ್ಯನವರು.— ತಾವೇ caseನ್ನು hearಮಾಡಿ ವಾಪಸು ಕೊಟ್ಟಿರುವುದರಿಂದ ಊಹೆಯಮೇಲೆ ಹೇಳುವುದಕ್ಕಾಗುವುದಿಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಜ್ಞಾಪಕವಿಲ್ಲ.